ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 19-06-1970

*ತ್ರಿಮೂರ್ತಿ ಲೈಟ್ಸ್ ನ ಸಾಕ್ಷಾತ್ಕಾರ.*(त्रिमूर्ति लाइट्स का साक्षात्कार”)

ಬ್ರಾಹ್ಮಣರಿಗೆ ತ್ರಿಮೂರ್ತಿ ಶಿವವಂಶಿ ಎಂದು ಹೇಳುತ್ತೀರಲ್ಲವೇ? ತ್ರಿಮೂರ್ತಿ ತಂದೆಯ ಮಕ್ಕಳು ಸಹ ತ್ರಿಮೂರ್ತಿಯಾಗಿದ್ದಾರೆ. ತಂದೆ ಹೇಗೆ ತ್ರಿಮೂರ್ತಿಯೋ ಹಾಗೆ ತಾವೂ ಸಹ ತ್ರಿಮೂರ್ತಿಯಾಗಿದ್ದೀರಲ್ಲವೇ? ಸಾಕ್ಷಾತ್ಕಾರದ ಮೂರೂ ಪ್ರಕಾರದ ಲೈಟ್ಸ್ ಬರುತ್ತದೆಯೇ? ಅವು ಯಾವವು ಎಂದು ಗೊತ್ತಿದೆಯೇ? ತಮ್ಮಿಂದ ಲೈಟನ ಸಾಕ್ಷಾತ್ಕಾರವಾಗುವುದು ಗೊತ್ತಾಗುತ್ತದೆಯೇ? ತ್ರಿಮೂರ್ತಿವಂಶಿ ತ್ರಿಮೂರ್ತಿ ಮಕ್ಕಳ ಮೂರು ಪ್ರಕಾರದ ಲೈಟ್ಸ್ ನ ಸಾಕ್ಷಾತ್ಕಾರವಾಗುವುದು. ಅವು ಯಾವವು? ಒಂದಾಗಿದೆ ಕಣ್ಣುಗಳಿಂದ, ಕಣ್ಣುಗಳ ಜ್ಯೋತಿಯೆಂದು ಹೇಳುತ್ತಾರಲ್ಲವೇ? ಎರಡು ದೊಡ್ಡ ಬಲ್ಬ್ ಉರಿಯುವಂತೆ ಕಣ್ಣುಗಳು ಕಂಡು ಬರುವವು. ಎರಡನೆಯದಾಗಿದೆ ಮಸ್ತಕದ ಲೈಟ್. ಮೂರನೆಯದಾಗಿ ತಲೆಯ ಮೇಲೆ ಪ್ರಕಾಶದ ಕಿರೀಟ, ಈಗ ಈ ಮೂರೂ ಲೈಟ್ಸ್ ನ ಸಾಕ್ಷಾತ್ಕಾರವಾಗುವಂತಹ ಪರಿಶ್ರಮಪಡಬೇಕು. ಯಾರೇ ಎದುರಿಗೆ ಬಂದರೂ ಅವರಿಗೆ ಈ ಕಣ್ಣುಗಳು ಬಲ್ಬನಂತೆ ಕಂಡುಬರಬೇಕು. ಜ್ಯೋತಿಯೇ ಜ್ಯೋತಿ ಕಂಡುಬರಬೇಕು. ಅಂಧಕಾರದಲ್ಲಿ ಹೇಗೆ ನಿಜವಾದ ವಜ್ರ ಹೊಳೆಯುತ್ತದೆಯೋ, ಹೇಗೆ ಬಹಳ ಶಕ್ತಿ ಮತ್ತು ಒಳ್ಳೆಯ ರೀತಿಯಲ್ಲಿ ಪ್ರಕಾಶವನ್ನು ಹರಡುವಂತಹ ಸರ್ಚ್ ಲೈಟ್ ಇರುತ್ತದೆಯೋ, ಹಾಗೆಯೇ ಮಸ್ತಕದ ಜ್ಯೋತಿಯ ಸಾಕ್ಷಾತ್ಕಾರವಾಗಬೇಕು. ತಲೆಯ ಮೇಲೆ ಪ್ರಕಾಶದ ಕಿರೀಟವನ್ನಂತೂ ತಿಳಿದಿರುವಿರಲ್ಲವೇ? ಹೀಗೆ ತ್ರಿಮೂರ್ತಿ ಲೈಟ್ನ ಸಾಕ್ಷಾತ್ಕಾರ ಒಬ್ಬೊಬ್ಬರಿಂದ ಆಗಬೇಕು. ಆಗ ಇವರು ಫರಿಷ್ತೆಯಂತೆ ಇದ್ದಾರೆ ಎಂದು ಹೇಳಲಾಗುತ್ತದೆ. ಸಾಕಾರದಲ್ಲಿ ಕಣ್ಣುಗಳು, ಮಸ್ತಕ ಮತ್ತು ತಲೆಯ ಕಿರೀಟದ ಸಾಕ್ಷಾತ್ಕಾರ ಸ್ಪಷ್ಟವಾಗಿ ಆಗುವುದು.

ಕಣ್ಣುಗಳ ಕಡೆಗೆ ನೋಡುತ್ತಲೇ ಪ್ರಕಾಶವನ್ನು ಕಾಣುವರು. ನಿಮ್ಮ ಪ್ರಕಾಶವನ್ನು ನೋಡಿ ಬೇರೆಯವರೂ ಸಹ ಲೈಟ್ ಆಗುವರು. ಎಷ್ಟೇ ಮನಸ್ಸಿನಿಂದ ಅಥವಾ ಸ್ಥಿತಿಯಿಂದ ಭಾರೀತನವಿದ್ದರೂ ಬರುತ್ತಲೇ ಹಗುರರಾಗಬೇಕು. ಈ ಸ್ಥಿತಿಯನ್ನು ಈಗ ತಂದುಕೊಳ್ಳಬೇಕು ಏಕೆಂದರೆ ತಮ್ಮನ್ನು ನೋಡಿ ಬೇರೆಯವರೂ ಈಗ ತಮ್ಮ ಸ್ಥಿತಿಯನ್ನು ಈ ರೀತಿ ಮಾಡಿಕೊಳ್ಳುವರು. ಈಗಿನಿಂದಲೇ ತಮ್ಮ ಗಾಯನ ಕೇಳುವಿರಿ, ದ್ವಾಪರದ ಗಾಯನ ದೊಡ್ಡ ಮಾತೇನಲ್ಲ. ಆದರೆ ಇಂತಹ ಸಾಕ್ಷಾತ್ಕಾರ ಮೂರ್ತಿ ಮತ್ತು ಸಾಕ್ಷಾತ್ ಮೂರ್ತಿಯಾಗುವುದರಿಂದ ಈಗಿನ ತಮ್ಮ ಗಾಯನವನ್ನು ಕೇಳುವಿರಿ. ತಮ್ಮೆದುರಿಗೆ ಪ್ರಕಾಶವೇ ಪ್ರಕಾಶ ಕಂಡುಬರುವುದು. ಮಧುಬನವೇ ಪ್ರಕಾಶದ ಮನೆಯಾಗುತ್ತದೆ. ಈ ದೀಪಗಳನ್ನು ನೋಡಿದರೂ ನೋಡದಂತಿರುವಿರಿ. ವತನದಲ್ಲಿ ಹೇಗೆ ಪ್ರಕಾಶವೇ ಪ್ರಕಾಶ ಕಂಡುಬರುತ್ತದೆಯೋ ಹಾಗೆ ಈ ಸ್ಥೂಲವತನ ಪ್ರಕಾಶದ ಮನೆಯಾಗುವುದು. ತಾವು ಯಾವಾಗ ಚೈತನ್ಯ ಪ್ರಕಾಶದ ಮನೆಯಾಗುವಿರೋ ಆಗ ಈ ಮಧುಬನವೂ ಪ್ರಕಾಶದ ಮನೆಯಾಗುವುದು. ಈಗ ಶಿಕ್ಷಣದ ಕೊನೆಯ ವಿಷಯ ಇದಾಗಿದೆ - ಪ್ರಾಕ್ಟಿಕಲ್ನಲ್ಲಿ. ಥಿಯರಿಯ ಕೋರ್ಸ್ ಸಮಾಪ್ತಿಯಾಯಿತು. ಪ್ರಾಕ್ಟಿಕಲ್ ಕೋರ್ಸನ ಕೊನೆಯ ವಿಷಯ. ಈ ಕೊನೆಯ ವಿಷಯದಲ್ಲಿ ಬಹಳ ತೀವ್ರ ಪುರುಷಾರ್ಥ ಮಾಡಬೇಕು. ಈ ಸ್ಥಿತಿಯ ಗಾಯನವಿದೆ.

ಮಾಯೆಯಿಂದ ವಿದಾಯವಿರುತ್ತದೆ ಆದರೆ ಬಾಪ್ ದಾದಾರಿಂದ ಎಂದೂ ವಿದಾಯವನ್ನು ತೆಗೆದುಕೊಳ್ಳುವುದಿಲ್ಲ. ಬಾಪ್ ದಾದಾರೊಂದಿಗೆ ಮಿಲನವಾಗುತ್ತದೆ. ಈ ಕಡಿಮೆ ಸಮಯದ ಮಿಲನ ಸದಾ ಕಾಲಕ್ಕೂ ಮಿಲನಕ್ಕೆ ನಿಮಿತ್ತವಾಗುತ್ತದೆ. ತಂದೆಯ ಜೊತೆಗೆ ಗುಣ ಮತ್ತು ಕರ್ತವ್ಯದ ಮಿಲನವೇ ಮಿಲನವಾಗಿದೆ. ಇದೇ ಪ್ರಯತ್ನವನ್ನು ಸದಾ ಮಾಡಿ, ಒಳ್ಳೆಯದು.

ಸಂಕಲ್ಪಗಳಿಗೆ ಬ್ರೇಕ್ ಹಾಕುವಂತಹ ಮುಖ್ಯ ಸಾಧನ ಯಾವುದು ಗೊತ್ತೇ? ಯಾವುದೇ ಕಾರ್ಯವನ್ನು ಮಾಡುವ ಮೊದಲೇ ವಿಚಾರ ಮಾಡಿ ಕಾರ್ಯವನ್ನು ಶುರು ಮಾಡಿ. ಯಾವ ಕಾರ್ಯವನ್ನು ಮಾಡಲು ಹೊರಟಿರುವೇನೋ ಅದು ಬಾಪ್ ದಾದಾರ ಕಾರ್ಯವಾಗಿದೆ, ನಾನು ನಿಮಿತ್ತನಾಗಿದ್ದೇನೆ. ಯಜ್ಞವನ್ನು ರಚಿಸಿದಾಗ ಸಮಾಪ್ತಿಯ ಸಮಯ ಆಹುತಿಯನ್ನು ಕೊಡುವಂತೆ ಕಾರ್ಯವನ್ನು ಸಮಾಪ್ತಿ ಮಾಡಿದಾಗ ಪರಿಣಾಮವನ್ನು ತಂದೆಗೆ ಸಮರ್ಪಣೆ, ಸ್ವಾಹಾ ಮಾಡಿದರೆ ಯಾವ ಸಂಕಲ್ಪಗಳು ಇರುವುದಿಲ್ಲ. ನಿಮಿತ್ತರಾಗಿ ಕಾರ್ಯ ಮಾಡಿ ಮತ್ತು ಕಾರ್ಯ ಸಮಾಪ್ತಿಯಾದಾಗ, ಸ್ವಾಹಾ ಮಾಡಿದಾಗ ಯಾವ ಸಂಕಲ್ಪಗಳು ಬರುವವು? ಬೆಂಕಿಯಲ್ಲಿ ವಸ್ತುವನ್ನು ಹಾಕಿದಾಗ ಅದರ ನಾಮ-ರೂಪವಿಲ್ಲದಿರುವಂತೆ ಪ್ರತಿಯೊಂದು ವಸ್ತುವಿನ ಸಮಾಪ್ತಿಯಲ್ಲಿ ಸಂಪೂರ್ಣ ಸ್ವಾಹಾ ಮಾಡಬೇಕು. ನಂತರ ತಮ್ಮ ಜವಾಬ್ದಾರಿಯಲ್ಲ. ಯಾರಿಗೆ ಅರ್ಪಣೆಯಾದಿರೋ ಆಮೇಲೆ ಅವರ ಜವಾಬ್ದಾರಿ. ನಂತರ ಸಂಕಲ್ಪಗಳು ಏಕೆ? ಹೇಗೆ ಮನೆಯಲ್ಲಿ ಯಾರಾದರೂ ದೊಡ್ಡವರಿದ್ದರೆ, ಏನೇ ಕೆಲಸ ಮಾಡಿದರೂ ಅವರಿಗೆ ಹೇಳಿ ಖಾಲಿಯಾಗುತ್ತಾರೆ. ಅದೇ ರೀತಿ ಕಾರ್ಯ ಮಾಡಿದಾಗ ಸಮಾಚಾರ ಹೇಳಿ, ಸಾಕು. ಅವ್ಯಕ್ತ ರೂಪವನ್ನು ಸಮ್ಮುಖದಲ್ಲಿ ಇಟ್ಟುಕೊಂಡು ಹೀಗೆ ಮಾಡಿ ನೋಡಿ. ಯಾರು ಎಷ್ಟು ಸಹಯೋಗಿಯಾಗುವರೋ ಅವರಿಗೆ ಹೆಚ್ಚಿನ ಸಹಯೋಗ ಕೊಡಬೇಕಾಗುವುದು. ಹೇಗೆ ತಮ್ಮ ಉನ್ನತಿಯ ಬಗೆಗೆ ಯೋಚಿಸುತ್ತೀರೋ ಆ ರೀತಿ ಶುದ್ಧ ಭಾವನೆ, ಶುಭ ಚಿಂತಕ ಮತ್ತು ಶುಭ ಚಿಂತನೆಯ ರೂಪದಲ್ಲಿ ಹೆಚ್ಚಿನ ಸಹಯೋಗ ಎರಡೂ ರೂಪದಿಂದ ಯಾವುದೇ ಆತ್ಮನಿಗೆ ವಿಶೇಷ ಸಹಯೋಗ ಕೊಡಬಹುದು. ಕೊಡಬೇಕು. ಇದರಿಂದ ಬಹಳ ಸಹಯೋಗ ಸಿಗುತ್ತದೆ. ಹೇಗೆ ಯಾವುದಾದರೂ ಬಡವನಿಗೆ ಅನಿರೀಕ್ಷಿತವಾಗಿ ಪರಿಶ್ರಮವಿಲ್ಲದೇ ಪ್ರಾಪ್ತಿ ಆಗುತ್ತದೆಯೋ ಅದೇ ರೀತಿ ಯಾವುದೇ ಆತ್ಮನ ಪ್ರತಿ ಹೆಚ್ಚಿನ ಸಹಯೋಗ ಕೊಟ್ಟಾಗ ಆ ಆತ್ಮ ತನಗೆ ವಿಶೇಷ ಸಹಯೋಗ ಸಿಕ್ಕಿದೆ ಎಂದು ಅನುಭವ ಮಾಡುತ್ತದೆ. ಈ ಸೇವೆಯನ್ನು ಮಾಡಿ ತೋರಿಸಬೇಕು. ಎಷ್ಟೆಷ್ಟು ತಾವು ಸೂಕ್ಷ್ಮವಾಗುವಿರೋ ಅಷ್ಟು ಈ ಸೂಕ್ಷ್ಮ ಸೇವೆಯೂ ವೃದ್ಧಿಯಾಗುವುದು. ಸ್ಥೂಲದ ಜೊತೆಗೆ ಸೂಕ್ಷ್ಮದ ಪ್ರಭಾವ ಬೇಗ ಬೀಳುತ್ತದೆ ಮತ್ತು ಸದಾಕಾಲಕ್ಕಿರುತ್ತದೆ. ಬಾಪ್ ದಾದಾ ಸಹ ವಿಶೇಷ ಸಹಯೋಗವನ್ನು ಕೊಡುತ್ತಾರೆ. ಹೆಚ್ಚಿನ ಸಹಯೋಗ ಅನುಭವವಾಗುವುದು. ಪರಿಶ್ರಮ ಕಡಿಮೆ ಪ್ರಾಪ್ತಿ ಹೆಚ್ಚು ಒಳ್ಳೆಯದು.

ಬಾಪ್ ದಾದಾ ಮಕ್ಕಳಿಗೆ ಎಷ್ಟು ಅವಿನಾಶಿ ಸ್ನೇಹ ಕೊಡುವರೋ ಅಷ್ಟು ಮಕ್ಕಳಿಗೆ ಅವಿನಾಶಿ ಸ್ನೇಹವಿದೆಯೇ? ಈ ಅವಿನಾಶಿ ಸ್ನೇಹವೊಂದೇ 21 ಜನ್ಮಗಳ ಬಂಧನವನ್ನು ಜೋಡಿಸುವಂತಹ ಒಂದು ದಾರವಾಗಿದೆ. ಅದರಲ್ಲೂ ಅಖಂಡ ಸ್ನೇಹ. ಎಷ್ಟು ದಾರ ಗಟ್ಟಿಯಾಗಿದೆಯೋ ಅಷ್ಟು ಹೆಚ್ಚು ಸಮಯ ನಡೆಯುತ್ತದೆ. ಸಂಗಮದ ಸಮಯ 21 ಜನ್ಮಗಳನ್ನು ಜೋಡಿಸುತ್ತದೆ. ಈ ಸಂಗಮಯುಗದ ಒಂದೊಂದು ಸಂಕಲ್ಪ, ಒಂದೊಂದು ಕರ್ಮ 21 ಜನ್ಮದ ಬ್ಯಾಂಕ್ ನಲ್ಲಿ ಜಮಾ ಆಗುತ್ತದೆ. ಇಷ್ಟು ಗಮನವಿಟ್ಟು ಪ್ರತಿ ಸಂಕಲ್ಪಮಾಡಬೇಕು. ಏನು ಮಾಡುವೆನೋ ಅದು ಜಮಾ ಆಗುವುದು. ಹಾಗಾದರೆ ಎಷ್ಟು ಜಮಾ ಆಗುವುದು? ಒಂದು ಸಂಕಲ್ಪವೂ ವ್ಯರ್ಥವಾಗದಿರಲಿ, ಒಂದು ಸಂಕಲ್ಪ ವ್ಯರ್ಥವಾದರೂ ಜಮಾದಲ್ಲಿ ಕಡಿಮೆಯಾಗುವುದು. ಆದ್ದರಿಂದ ಜಮಾ ಮಾಡುವುದಿದ್ದರೆ ವ್ಯರ್ಥವಾಗದಿರಲಿ. ಹಾಗಾದರೆ ಎಷ್ಟು ಪುರುಷಾರ್ಥವನ್ನು ಮಾಡಬೇಕು? ಸಮಯವನ್ನು ಬಿಡಿ, ಸಂಕಲ್ಪ ವ್ಯರ್ಥವಾಗಬಾರದು. ಈಗ ಪುರುಷಾರ್ಥ ಈ ಸೀಮೆಯನ್ನು ತಲುಪುತ್ತಿದೆಯೇ? ಹೇಗೆ ಶಿಕ್ಷಣ ದಿನದಿನಕ್ಕೆ ಉನ್ನತವಾಗುತ್ತದೆಯೋ ಇದೂ ಸಹ ಹಾಗೆಯೇ, ದೊಡ್ಡ ತರಗತಿಯಲ್ಲಿ ಓದುತ್ತಿರುವಿರಲ್ಲವೇ?.

ಅವ್ಯಕ್ತ ಮುರಳಿ 19-06-1970.

***ತ್ರಿಮೂರ್ತಿ ಲೈಟ್ಸ್ ನ ಸಾಕ್ಷಾತ್ಕಾರ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ತ್ರಿಮೂರ್ತಿ ಶಿವಂಶಿಯಾದ ನಾನು ಮೂರು ವಿಧವಾದ ಲೈಟ್ಸ್

• ನಯನಗಳಿಂದ ಲೈಟ್,

• ಮಸ್ತಕದ ಲೈಟ್,

• ತಲೆಯ ಮೇಲೆ ಪ್ರಕಾಶದ ಲೈಟ್ ಅನ್ನು ಸಾಕ್ಷಾತ್ಕಾರ ಮಾಡಿಸುವ ಫರಿಶ್ತಾ.

2. ನಾನು ಚೈತನ್ಯ ಲೈಟ್ ಹೌಸ್ ಆಗಿ ಇತರರನ್ನು ಮತ್ತು ಮಧುಬನವನ್ನು ಕೂಡ ಲೈಟ್ ಹೌಸ್ ನ ಹಾಗೆ ಮಾಡಿ ಅಂತಿಮ ಸಬ್ಜೆಕ್ಟ್ ಅನ್ನು ಪ್ರಯೋಗದಲ್ಲಿ ತಂದಿದ್ದೇನೆ.

3. ನಾನು ಬಾಪ್ ದಾದಾರವರ ಗುಣಗಳು ಮತ್ತು ಕರ್ತವ್ಯವನ್ನು  ನನ್ನದಾಗಿಸಿಕೊಂಡು ಬಾಪ್ ದಾದಾರವರೊಂದಿಗೆ ಮಿಲನ ಮಾಡಿಕೊಂಡು ಮಾಯೆಗೆ ವಿದಾಯವನ್ನು ಕೊಟ್ಟಿದ್ದೇನೆ.

4. ನಾನು ಯಾವುದೇ ಕಾರ್ಯ ಮಾಡುವಾಗ ಮೊದಲೇ ಆಲೋಚಿಸಿ ನಿಮಿತ್ತ ಭಾವನೆಯಿಂದ ಕಾರ್ಯವನ್ನು ಮಾಡಿದ್ದೇನೆ.

5. ನಾನು ಯಾವ ಕರ್ತವ್ಯವನ್ನು ಮಾಡಿದ್ದೇನೆಯೋ ಅದಕ್ಕೆ ಬರುವ ಫಲಿತಾಂಶವನ್ನು ತಂದೆಗೆ ಸಂಪೂರ್ಣ ಅರ್ಪಣೆ ಮಾಡಿರುವ ಅವ್ಯಕ್ತ ಸ್ವರೂಪ.

6. ನಾನು ಎಲ್ಲರಿಗೂ ಶುದ್ಧ ಭಾವನೆ, ಶುಭ ಚಿಂತನೆಯಿಂದ ವಿಶೇಷ ಸಹಯೋಗವನ್ನು ಕೊಟ್ಟು ಅನುಭವ ಮಾಡಿಸಿರುವ ಉದಾಹರಣೆಯಾಗಿದ್ದೇನೆ.

7. ನಾನು ಅವಿನಾಶಿ ಸ್ನೇಹದಿಂದ 21 ಜನ್ಮಗಳಿಗೆ ಸಂಬಂಧಗಳನ್ನು ಇಲ್ಲೇ ತಯಾರು ಮಾಡಿಕೊಂಡಿದ್ದೇನೆ.

8. ನಾನು ಪ್ರತಿಯೊಂದು ಸಂಕಲ್ಪವನ್ನು ಸಮರ್ಥವಾಗಿಸಿಕೊಂಡು ನನ್ನ ಜಮಾ ಖಾತೆಯನ್ನು ಸಂಪೂರ್ಣವಾಗಿ ತುಂಬಿಸಿಕೊಂಡಿದ್ದೇನೆ.